ಮೂಲಭೂತ ದೃಷ್ಟಿಕೋನ ಅವರ ಮುಂದಿನ ಎಲ್ಲಾ ಅಧ್ಯಯನಗಳಲ್ಲಿ ವಿವಿಧ ರೂಪ ತಾಳುವುದನ್ನು ಕಾಣಬಹುದು. ತಮ್ಮ ಈ ಅನ್ವೇಷಣೆಯ ಹಾದಿಯಲ್ಲಿ, ಡಿಆರ್ ಜಾಗತಿಕ ಮಟ್ಟದ ಚಿಂತಕರನ್ನು ಆಕರ್ಷಿಸಿದ್ದು ಅವರ ಬೌದ್ಧಿಕ ಜೀವನದಲ್ಲಿ ಹೊಸ ತಿರುವನ್ನು ನೀಡಿತು. ದೆಹಲಿಯ ಸೆಂಟರ್ ಫಾರ್ ದಿ ಸ್ಟಡಿ ಆಫ್ ಡೆವಲಪಿಂಗ್ ಸೊಸೈಟೀಸ್ (ಸಿ.ಎಸ್.ಡಿ.ಎಸ್.) ಮತ್ತು ಸಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡಿ (ಐ.ಐ.ಎ.ಎಸ್.) ಅಂತಹ ಸಂಸ್ಥೆಗಳಲ್ಲಿ ಡಿಆರ್ ಕಳೆದ ದಿನಗಳು ಅವರಿಗೆ ಹೊಸ ಬೌದ್ಧಿಕ ಲೋಕವನ್ನು ತೆರೆದು ತೋರಿಸಿದವು. ಕನ್ನಡ ಲೋಕದೊಳಗೆ ಅನಂತಮೂರ್ತಿ, ಲಂಕೇಶ್, ಸುಬ್ಬಣ್ಣ ಮುಂತಾದವರ ಒಡನಾಟ ಒಂದು ಕಡೆಯಾದರೆ, ಕನ್ನಡಲೋಕದಾಚೆಗೆ ಆಶೀಶ್ ನಂದಿ, ಯೋಗೇಂದ್ರ ಯಾದವ್, ಶಿವವಿಶ್ವನಾಥ, ಹರೀಶ್ ತ್ರಿವೇದಿ ಮುಂತಾದ ರಾಷ್ಟ್ರೀಯ ಮಟ್ಟದ ಬುದ್ಧಿಜೀವಿಗಳ ಸಾಂಗತ್ಯ ಡಿಆರ್ ಅವರಿಗೆ ವೈವಿಧ್ಯಮಯ ಮತ್ತು ವಿಸ್ತೃತ ದೃಷ್ಟಿಕೋನಗಳನ್ನು ಒದಗಿಸಿತು.



ಇದಕ್ಕೆ ಮುಕುಟಪ್ರಾಯವಾಗಿ, 1997ರಲ್ಲಿ ಶಿಕಾಗೊ ವಿಶ್ವವಿದ್ಯಾಲಯದ 'ದಕ್ಷಿಣ ಏಷ್ಯಾದ ಭಾಷೆಗಳು ಮತ್ತು ನಾಗರಿಕತೆಗಳು' (ಡಿಪಾರ್ಟ್ ಮೆಂಟ್ ಆಫ್ ಸೌತ್ ಏಷ್ಯನ್ ಲಾಂಗ್ವೇಜಸ್ ಅಂಡ್ ಸಿವಿಲೈಜೇಷನ್ಸ್) ಎಂಬ ಶೈಕ್ಷಣಿಕ ವಿಭಾಗವು ಡಿಆರ್ ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿತು. ಎ.ಕೆ. ರಾಮಾನುಜನ್ ನಂತರ ಈ ಗೌರವವನ್ನು ಪಡೆದವರು ಡಿಆರ್. ಈ ಅಂತರ ರಾಷ್ಟ್ರೀಯ ಅನುಭವವು ಅವರ ತಿಳಿವಳಿಕೆಯ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿತು.

ಶಿಕಾಗೊದಲ್ಲಿ ಶೆಲ್ಡನ್ ಪೋಲಾಕ್ ಅವರಂತಹ ಜಾಗತಿಕ ಮಟ್ಟದ ವಿದ್ವಾಂಸರ ಸಂಪರ್ಕ ಮತ್ತು ನವೀನ ಬೌದ್ಧಿಕ ಭಾಷೆಯ ಪರಿಚಯವು ಡಿಆರ್ ಅವರ ಚಿಂತನೆಗೆ ಹೊಸ ಪದಕೋಶವನ್ನು (conceptual vocabulary) ದೊರಕಿಸಿಕೊಟ್ಟಿತು. ಈ ಪದ ಕೋಶದಲ್ಲಿ ಅತ್ಯಂತ ಪ್ರಮುಖವಾದ ಪರಿಕಲ್ಪನೆಯೆಂದರೆ, 'ಸಾಹಿತ್ಯ ಸಂಸ್ಕೃತಿ' (Literary Culture). 'ಸಾಹಿತ್ಯ ಸಂಸ್ಕೃತಿ' ಮಾದರಿಯ ಅಧ್ಯಯನದ ಗುರಿ ಎಂದರೆ, ಸಾಹಿತ್ಯ ಪಠ್ಯದ ಆಂತರಿಕ ಜೀವನದ ಆಚೆಗೆ, ಸಾಹಿತ್ಯದ ಪರಿಸರ, ತಾಂತ್ರಿಕ, ಸಾಮಾಜಿಕ ಮತ್ತು ರಾಜಕೀಯ ವಿದ್ಯಮಾನಗಳ ಜೊತೆ ಸಾಹಿತ್ಯ ಹುಟ್ಟುವ ಪರಿಯನ್ನು ಶೋಧಿಸುವುದು. ಸಾಹಿತ್ಯ ಸಂಸ್ಕೃತಿಗೆ ಸಂಬಂಧ ಪಟ್ಟಂತೆ ಪೋಲಾಕ್ ಅವರು ಹೊಸ ರೀತಿಯ ಪ್ರಶ್ನೆಗಳನ್ನು ಕೇಳುತ್ತಿದ್ದ ಕಾಲವದು. ದಕ್ಷಿಣ ಏಷ್ಯಾದ ಸಾಹಿತ್ಯ ಸಂಸ್ಕೃತಿಗಳಲ್ಲಿ 'ಸಾಹಿತ್ಯಕ' ಎಂಬುದು ಹೇಗೆ ರೂಪಾಂತರಗೊಂಡಿದೆ' ಎಂದು ಅನ್ವೇಷಿಸುವ ಒಂದು ಮಹತ್ವಾಕಾಂಕ್ಷಿ ಸಂಶೋಧನಾ ಯೋಜನೆಯನ್ನು ಸಹ ಅವರು ರೂಪಿಸುತ್ತಿದ್ದರು. ಈ ಯೋಜನೆಯ ಭಾಗವಾಗಿ, ಸಂಸ್ಕೃತ, ಪರ್ಷಿಯನ್, ಉರ್ದು, ಬಂಗಾಳಿ, ಹಿಂದಿ, ತಮಿಳು, ತೆಲುಗು, ಸಿಂಹಳ ಮುಂತಾದ ಭಾಷೆಗಳಲ್ಲಿ 'ಸಾಹಿತ್ಯ' ಎಂಬ ಪರಿಕಲ್ಪನೆಯ ಆಚರಣೆ ಐತಿಹಾಸಿಕವಾಗಿ ಹೇಗೆ ರೂಪಾಂತರ ಹೊಂದಿದೆ ಎಂಬುದರ ಕುರಿತು ಡಿಆರ್ ಸೇರಿದಂತೆ ವಿವಿಧ ವಿದ್ವಾಂಸರಿಂದ ಪ್ರಬಂಧಗಳನ್ನು ಪೋಲಾಕರು ಬರೆಸಿದರು.

ಇದರ ಫಲವಾಗಿ ಪೋಲಾಕ್ ಸಂಪಾದಕತ್ವದಲ್ಲಿ ಪ್ರಕಟವಾದ 'ಲಿಟರರಿ ಕಲ್ಚರ್ಸ್ ಇನ್ ಹಿಸ್ಟರಿ: ರಿಕನ್‌ಸ್ಟ್ರಕ್ಷನ್ಸ್ ಫ್ರಮ್ ಸೌಥ್ ಏಷ್ಯಾ' (2003) ಎಂಬ ವಿದ್ವತ್ ಪ್ರಬಂಧಗಳ ಸಂಕಲನದಲ್ಲಿ ಡಿಆರ್ ಅವರ 'ಕ್ರಿಟಿಕಲ್ ಟೆನ್ಶನ್ಸ್ ಇನ್ ದ ಹಿಸ್ಟರಿ ಆಫ್ ಕನ್ನಡ ಲಿಟರರಿ ಕಲ್ಚರ್' ಎಂಬ ವಿಸ್ತಾರವಾದ ಲೇಖನ ಸೇರಿಕೊಂಡಿತು. ಸಾಹಿತ್ಯಕ (ಲಿಟರರಿ) ಎನ್ನುವುದು ಕನ್ನಡ ಸಂಸ್ಕೃತಿಯಲ್ಲಿ ಹೇಗೆ ಬದಲಾಗಿದೆ ಎಂಬ ಕಥೆಯನ್ನು ಹೇಳುವ ಈ ಸುದೀರ್ಘ ಲೇಖನ (ಸುಮಾರು 60 ಪುಟ) ವಿದ್ವತ್ಪೂರ್ಣ ಹಾಗೂ ಆಳವಾದ ಒಳನೋಟಗಳನ್ನೂ ಒದಗಿಸುವ ಬರವಣಿಗೆಯಾಗಿ